For More Job News Visit : www.kpscvaani.com

ನ್ಯಾಯ ವಿಜ್ಞಾನ ಪ್ರಯೋಗಾಲಯ

ಮಡಿವಾಳ, ಬೆಂಗಳೂರು-560068

ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇಲ್ಲಿ ಖಾಲಿ ಇರುವ ಉಪ ನಿರ್ದೇಶಕರ, ಸಹಾಯಕ ನಿರ್ದೇಶಕರ, ಹಿರಿಯ ವೈಜ್ಞಾನಿಕ ಅಧಿಕಾರಿ ಹುದ್ದೆಗಳ ಆಧಾರದ ಮೇಲೆ ಅರ್ಜಿಯನ್ನು ಸಲ್ಲಿಸುವ ಕುರಿತು

ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕದಲ್ಲಿ ಖಾಲಿ ಇರುವ 1 ಉಪ ನಿರ್ದೇಶಕರ ಹುದ್ದೆ, 6 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮತ್ತು 20 ಹಿರಿಯ ವೈಜ್ಞಾನಿಕ ಅಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದ್ದು, ಈ ಕೆಳಕಂಡ ವಿದ್ಯಾರ್ಹತೆಗಳನ್ನು/ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

1) ಉಪ ನಿರ್ದೇಶಕರು

1. **ವಯೋಮಿತಿ** :- ಕನಿಷ್ಠ 18 ವರ್ಷ, ಗರಿಷ್ಠ 65 ವರ್ಷ

2. **ವಿದ್ಯಾರ್ಹತೆ** :- ಡಾಕ್ಟರೇಟ್ ಪದವಿಯನ್ನು ಭೌತಶಾಶ್ತ್ರ/ರಸಾಯನಶಾಸ್ತ್ರ/ಜೈವಿಕ ತಂತ್ರಜ್ಞಾನ/ಫಾರೆನ್ಸಿಕ್ ಸೈನ್ಸ್/ಜೀವರಸಾಯನಶಾಸ್ತ್ರ/ಫಾರ್ಮಕಾಲಜಿ/ಸಸ್ಯಶಾಸ್ತ್ರ/ ಪ್ರಾಣಿಶಾಸ್ತ್ರ/ಸೂಕ್ಷ್ಮಜೀವವಿಜ್ಞಾನ/ಜೀವ ವಿಜ್ಞಾನ ವಿಷಯದಲ್ಲಿ ಪಡೆದಿರಬೇಕು.

3. **ಕೆಲಸ ಅನುಭವ:-**

ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಸರ್ಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಅಥವಾ ಕೇಂದ್ರ/ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರುವ ಸಂಶೋದನಾ ಸಂಸ್ಥೆಯಲ್ಲಿ ಕನಿಷ್ಠ 5 ವರ್ಷ ಕೆಲಸದ ಅನುಭವವನ್ನು ಸಹಾಯಕ ನಿರ್ದೇಶಕರು ಅಥವಾ ತತ್ಸಮಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು.

2) ಸಹಾಯಕ ನಿರ್ದೇಶಕರು

1. **ವಯೋಮಿತಿ** :- ಕನಿಷ್ಠ 18 ವರ್ಷ, ಗರಿಷ್ಠ 65 ವರ್ಷ

2. **ವಿದ್ಯಾರ್ಹತೆ** :- ಡಾಕ್ಟರೇಟ್ ಪದವಿಯನ್ನು ರಸಾಯನಶಾಸ್ತ್ರ/ಸೂಕ್ಷ್ಮ ಜೀವವಿಜ್ಞಾನ/ ಫಾರ್ಮಕಾಲಜಿ/ಫಾರೆನ್ಸಿಕ್ ಸೈನ್ಸ್/ಭೌತಶಾಸ್ತ್ರ/ಸಮಾನಾಂತರ ವಿದ್ಯಾರ್ಹತೆಯನ್ನು ಪಡೆದಿರಬೇಕು.

3. **ಕೆಲಸ ಅನುಭವ:-** ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಸರ್ಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯ ಅಥವಾ ಕೇಂದ್ರ/ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರುವ ಸಂಶೋಧನಾ ಸಂಸ್ಥೆಯಲ್ಲಿ ಕನಿಷ್ಠ 5 ವರ್ಷ ಕೆಲಸದ ಅನುಭವವನ್ನು ಹಿರಿಯ ವೈಜ್ಞಾನಿಕ ಅಧಿಕಾರಿ ಅಥವಾ ತತ್ಸಮಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು.

3) ಹಿರಿಯ ವೈಜ್ಞಾನಿಕ ಅಧಿಕಾರಿ

1. **ವಯೋಮಿತಿ** :- ಕನಿಷ್ಠ 18 ವರ್ಷ, ಗರಿಷ್ಠ 65 ವರ್ಷ

2. **ವಿದ್ಯಾರ್ಹತೆ** :- ಸ್ನಾತಕೋತ್ತರ ಪದವಿಯನ್ನು ಸಸ್ಯಶಾಸ್ತ್ರ/ಪ್ರಾಣಿಶಾಸ್ತ್ರ/ ಜೀವರಸಾಯನಶಾಸ್ತ್ರ/ಸೂಕ್ಷ್ಮ ಜೀವವಿಜ್ಞಾನ/ಜೀವ ವಿಜ್ಞಾನ/ರಸಾಯನಶಾಸ್ತ್ರ/ ಫಾರ್ಮಕಾಲಜಿ/ಫಾರೆನ್ಸಿಕ್ ಸೈನ್ಸ್/ಭೌತಶಾಸ್ತ್ರ/ಕಂಪ್ಯೂಟರ್ ವಿಜ್ಞಾನ/ಎಲೆಕ್ಟ್ರಾನಿಕ್ಸ್/ ಮಾಹಿತಿ ವಿಜ್ಞಾನ/ವಿದ್ಯಾರ್ಹತೆಯನ್ನು ಶೇಕಡ 55 ಅಂಕಗಳನ್ನು ಪಡೆದಿರಬೇಕು.

3. **ಕೆಲಸ ಅನುಭವ:-**ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲಾಗಿರುವ ಸರ್ಕಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಅಥವಾ ಕೇಂದ್ರ/ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರುವ ಸಂಶೋಧನಾ ಸಂಸ್ಥೆಯಲ್ಲಿ ಕನಿಷ್ಠ 5 ವರ್ಷ ಕೆಲಸದ ಅನುಭವವನ್ನು ವೈಜ್ಞಾನಿಕ ಅಧಿಕಾರಿ ಅಥವಾ ತತ್ಸಮಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು

ಈ ಗುತ್ತಿಗೆ ನೇಮಕಾತಿಯು ಪ್ರಾರಂಭಿಕವಾಗಿ ಒಂದು ವರ್ಷದ ಅವಧಿಯದಾಗಿದ್ದು, ಒಂದು ವರ್ಷದ ವಿಸ್ತರಣೆಗೆ ಅವಕಾಶವಿರುತ್ತದೆ. ಸದರಿ ಹುದ್ದೆಯಲ್ಲಿ ಗುತ್ತಿಗೆ ಮೇರೆಗೆ ಕರ್ತವ್ಯ ನಿರ್ವಹಿಸಲು ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ಈ ಜಾಹೀರಾತು ಪ್ರಕಟಗೊಂಡ 20 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿ ಮತ್ತು ನಿರ್ದೇಶಕರು, ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು, ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಹಿರಿಯ ವೈಜ್ಞಾನಿಕ ಅಧಿಕಾರಿ ಗುತ್ತಿಗೆ ಹುದ್ದೆಗಳ ನೇಮಕಾತಿ ಸಮಿತಿ, ಮಡಿವಾಳ, ಬೆಂಗಳೂರು-560068 ಇಲ್ಲಿಗೆ ತಮ್ಮ ಸೇವಾ ವಿವರಗಳೊಂದಿಗೆ ಅರ್ಜಿಯನ್ನು ಸಲ್ಲಿಸುವಂತೆ ಕೋರಲಾಗಿದೆ.

ಸಹಿ/-
ನಿರ್ದೇಶಕರು
ನ್ಯಾಯ ವಿಜ್ಞಾನ ಪ್ರಯೋಗಾಲಯ
ಬೆಂಗಳೂರು

ನಾ.ವಿ.ಸಂ.ಇ/ಬೆಂ.ನಗರ/3415/ಆಕಾರ್/2021-22

ಕೋವಿಡ್ 19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.